ಕರ್ನಾಟಕ ಸರ್ಕಾರ

ಕಾನೂನು ಮಾಪನಶಾಸ್ತ್ರ ಇಲಾಖೆ

ಸಂಖ್ಯೆ:ಕಾಮಾಇ/ಸ.ನಿ.ತಾ/ಸಿಆರ್- 128 /2022-23

ಕಾನೂನು ಮಾಪನಶಾಸ್ತ್ರ ನಿಯಂತ್ರಕರ ಕಚೇರಿ
ನಂ.1, ಆಲಿ ಆಸ್ಕರ್ ರಸ್ತೆ, ಪಿ.ಬಿ. 175
ಬೆಂಗಳೂರು-52, ದಿನಾಂಕ:25-10-2022.

**ಸುತ್ತೋಲೆ**

ವಿಷಯ:- ಕರ್ನಾಟಕ ಲೀಗಲ್ ಮೆಟ್ರಾಲಜಿ (ಅಮಲಜಾರಿ) ನಿಯಮಗಳು 2011 ರನ್ವಯ ತಯಾರಕ/ಮಾರಾಟ/ದುರಸ್ತಿ ಅನುಜ್ಞಾ ಪತ್ರಗಳನ್ನು 2023ನೇ ಸಾಲಿಗೆ ನವೀಕರಿಸಿಕೊಳ್ಳಲು ಆನ್‌ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- Karnataka Gazette order No.CLM/ACT/CR-66/2020-21 Bengaluru. Dated: 23-09-2020.

******

2022ನೇ ಸಾಲಿಗೆ ಹೊಸದಾಗಿ ನೀಡಿರುವ ಹಾಗೂ ನವೀಕರಿಸಲ್ಪಟ್ಟಿರುವ ತಯಾರಕರ,ಮಾರಾಟಗಾರರ ಮತ್ತು ದುರಸ್ತಿದಾರರ ಅನುಜ್ಞಾಪತ್ರಗಳ ಸಿಂಧುತ್ವದ 31-12-2022ಕ್ಕೆ ಅಂತ್ಯಗೊಳ್ಳಲಿದ್ದು, ದಿ:01-01-2023 ರಿಂದ 31-12-2023ರ ಅವಧಿಗೆ (2023 ನೇ ಸಾಲಿಗೆ) ಅನುಜ್ಞಾಪತ್ರಗಳನ್ನು ನವೀಕರಣಗೊಳಿಸಿಕೊಳ್ಳಬೇಕಾಗಿದ್ದು, ನವೀಕರಣಕ್ಕೆ ಸಂಬಂಧಿಸಿದಂತೆ ನೂತನ ವ್ಯವಸ್ಥೆಯ(ಸ್ವಯಂ ಚಾಲಿತ ನವೀಕರಣ) ಬಗ್ಗೆ ಈಗಾಗಲೇ ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ. ಅದರಂತೆ ಅನುಜ್ಞಾರ್ಥಿಗಳು ಆನ್-ಲೈನ್ ನಲ್ಲಿ ನಿಗಧಿಪಡಿಸಲಾಗಿರುವ ಶುಲ್ಕವನ್ನು ಇ-ಪೇಮೆಂಟ್ / ಗೇಟ್ ವೇ ಮೂಲಕ ಪಾವತಿ ಮಾಡಬೇಕಾಗಿರುತ್ತದೆ. ಈ ರೀತಿ ಆನ್-ಲೈನ್ ಮೂಲಕ ನವೀಕರಣಕ್ಕೆ ಬಂದಂತಹ ಪ್ರಸ್ತಾವನೆಗಳು ನವೀಕರಣ ಪ್ರಾಧಿಕಾರದಿಂದ ನವೀಕರಣ ಆಗುವ ಮೊದಲು ಆಯಾಯ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ಅವರವರ ಕ್ಷೇತ್ರವ್ಯಾಪ್ತಿಗೆ ಒಳಪಡುವಂತಹ ತಯಾರಿಕಾ/ ಮಾರಾಟ/ ದುರಸ್ಥಿ ಅನುಜ್ಞಾರ್ಥಿಗಳ ಬಗ್ಗೆ ಹೊಸದಾಗಿ ಈ ಕೆಳಕಂಡ ಅಂಶಗಳ ಮಾರ್ಪಾಡಿನೊಂದಿಗೆ ಕೆಲವು ವಿಶೇಷ ಸೂಚನೆಗಳನ್ನು ಆಯಾಯ ಜಿಲ್ಲಾ / ವೃತ್ತ ವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ಸ್ವಯಂ ಚಾಲಿತ ನವೀಕರಣಕ್ಕೆ ಮುಂಚಿತವಾಗಿ ಪರಿಶೀಲಿಸಿ ಸ್ವಯಂ ಚಾಲಿತ ನವೀಕರಣಕ್ಕೆ ಶಿಫಾರಸ್ಸು ಮಾಡಬೇಕಾಗಿರುತ್ತದೆ. ಕಳೆದ ಸಾಲಿನಲ್ಲಿ ಕೆಲವು ಅನರ್ಹ ಅನುಜ್ಞಾಪತ್ರಗಳು ಸ್ವಯಂ ಚಾಲಿತವಾಗಿ ನವೀಕರಣ ಗೊಂಡಿರುವುದರಿಂದ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕ್ಷೇತ್ರವ್ಯಾಪ್ತಿಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಅರ್ಹ/ಅನರ್ಹ ಅನುಜ್ಞಾಪತ್ರಗಳ ಬಗ್ಗೆ ನಿಖರವಾದ ಅಭಿಪ್ರಾಯವನ್ನು ಸೂಚಿಸಿ, ಕಾರಣ ಸಮೇತ ಸ್ವಯಂ ಚಾಲಿತ ನವೀಕರಣ ಆಗುವುದಕ್ಕೆ ಮತ್ತು ಆಗದೆ ಇರುವುದಕ್ಕೆ ಇ-ಮಾಪನ್ ತಂತ್ರಾಂಶದಲ್ಲಿ ತಾವು ಪರಿಶೀಲಿಸಿದ ಅಂಶಗಳ ಆಧಾರದ ಮೇಲೆ ಶಿಫಾರಸ್ಸು ಮಾಡಲು ಆದೇಶಿಸಿದೆ.

ಅಲ್ಲದೆ ತಮ್ಮ ಕ್ಷೇತ್ರವ್ಯಾಪ್ತಿಯಲ್ಲಿ ಅನರ್ಹ ಅನುಜ್ಞಾಪತ್ರಗಳು ಸ್ವಯಂ ಚಾಲಿತ ನವೀಕರಣಗೊಂಡರೆ ಅಯಾಯ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಹಾಗೂ ಈ ಸಂಬಂಧ ತಮ್ಮ ವಿಭಾಗದ ಎಲ್ಲಾ ಅನುಜ್ಞಾಪತ್ರಗಳು ನವೀಕರಣಕ್ಕೆ ಸೂಕ್ತವಾಗಿರುವುದೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಖಚಿತಪಡಿಸಿಕೊಂಡು ತಮ್ಮ ಅಧೀನ ಸಹಾಯಕ ನಿಯಂತ್ರಕರುಗಳ ಮೇಲುಸ್ತುವಾರಿಯನ್ನು ವಿಭಾಗ ಮಟ್ಟದಲ್ಲಿರುವ

ಪು.ತಿ.ನೋ...

ಆಯಾಯ ಉಪನಿಯಂತ್ರಕರು ಜವಾಬ್ದಾರಿ ವಹಿಸತಕ್ಕದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟ ಸಹಾಯಕ ನಿಯಂತ್ರಕರು ಮತ್ತು ಉಪನಿಯಂತ್ರಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತದೆ. ಹಾಗೂ ಅರ್ಹ ಅನುಜ್ಞಾಪತ್ರಗಳು ನಿಯಮಾನುಸಾರ ಸ್ವಯಂ ಚಾಲಿತ ನವೀಕರಣ ಆಗುವಂತೆ ಕ್ರಮ ವಹಿಸಲು ಸಹ ಸೂಚಿಸಲಾಗಿದೆ.

ಕ್ಷೇತ್ರಾಧಿಕಾರಿಗಳು ತಮ್ಮ ವ್ಯಾಪ್ತಿಯ ಅನುಜ್ಞಾಪತ್ರಗಳನ್ನು ಪರಿಶೀಲಿಸಲು ಇ-ಮಾಪನ್ ನಲ್ಲಿ ಅಳಿವಡಿಸಿರುವ ಹೊಸ ಮಾರ್ಗಸೂಚಿಗಳನ್ವಯ (ಫ್ಲೋ ಚಾರ್ಟ್) ಈ ಕೆಳಕಂಡಂತೆ ನಿರ್ವಹಿಸುವುದು. ಜೊತೆಗೆ ಸರ್ಕಾರವು ದಿನಾಂಕ: 10-12-2020 ರಂದು ಹೊರಡಿಸಿರುವ ಅಧಿಸೂಚನೆಯ ಕ್ರಮ ಸಂಖ್ಯೆ-7ರ ಅಂಶವನ್ನು ಕಡ್ಡಾಯವಾಗಿ ಪರಿಗಣಿಸಿ ಅದರಂತೆ ಸ್ವಯಂ ಚಾಲಿತ ನವೀಕರಣಕ್ಕೆ ಶಿಫಾರಸ್ಸು ಮಾಡಲು ಆದೇಶಿಸಿದೆ.

1. ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರುಗಳು ತಮ್ಮ User Id ಮತ್ತು Password ನೊಂದಿಗೆ ಇ-ಮಾಪನ ತಂತ್ರಾಂಶದಲ್ಲಿ ಲಾಗಿನ್ ಆಗಬೇಕು.

2. Licence ಮೇಲೆ ಕ್ಲಿಕ್ ಮಾಡಿ ನಂತರ Licence renewal details ಮೇಲೆ ಕ್ಲಿಕ್ ಮಾಡಬೇಕು ತದನಂತರ Licence/ Registration Details Tab ಗೆ ಹೋಗಿ Application Type and Application Category ಆಯ್ಕೆ ಮಾಡಿಕೊಂಡು ಅಲ್ಲಿ ತಯಾರ್ಕರು / ಮಾರಾಟಗಾರರು/ದುರಸ್ತಿದಾರರು ಎಂದು ವರ್ಗ ಆಯ್ಕೆ ಮಾಡಿ ನಂತರ Search ಮೇಲೆ ಕ್ಲಿಕ್ ಮಾಡಬೇಕು.

3. ತದನಂತರ ಲೈಸೆನ್ಸ್ ನಂಬರ್ ಮೇಲೆ ಕ್ಲಿಕ್ ಮಾಡಿದಾಗ ಆಯ್ಕೆ ಮಾಡಿರುವ ಅನುಜ್ಞಾಪತ್ರವು ತೆರೆದುಕೊಳ್ಳುತ್ತದೆ.

4. ತದನಂತರ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರು ಅವರ ವ್ಯಾಪ್ತಿಯಲ್ಲಿ ಬರುವ ತಯಾರಿಕಾ/ಮಾರಾಟ/ದುರಸ್ತಿ ಅನುಜ್ಞಾಪತ್ರ ಹೊಂದಿರುವ ಅನುಜ್ಞಾರ್ಥಿಗಳ ವಿರುದ್ಧ ಯಾವುದಾದರೂ ಕ್ರಿಮಿನಲ್ ಮೊಕದ್ದಮೆ ಇದ್ದಲ್ಲಿ/ಅಮಾನತ್ತುಗೊಂಡಿದ್ದಲ್ಲಿ ಸದರಿ ಅನುಜ್ಞಾಪತ್ರವನ್ನು ನವೀಕರಣ ಮಾಡಬೇಕೆ ಅಥವಾ ಮಾಡಬಾರದೆ ಎಂಬುದನ್ನು ಷರಾ ಅಂಕಣದಲ್ಲಿ ಷರಾ ನಮೂದಿಸಿ ಸೂಕ್ತ ಅಭಿಪ್ರಾಯವನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಅಪ್ಲೋಡ್ ಮಾಡುವುದು.

5. ಒಂದು ವೇಳೆ ಅಮಾನತ್ತು/ಕ್ರಿಮಿನಲ್ ಮೊಕದ್ದಮೆ ಇರುವ ಅನುಜ್ಞಾರ್ಥಿಗಳು ನಿಮ್ಮ ವ್ಯಾಪ್ತಿಯಲ್ಲಿ ಇದ್ದಲ್ಲಿ ಸದರಿ ಸಾಲಿಗೆ ಅನುಜ್ಞಾಪತ್ರ ನವೀಕರಣಕ್ಕೆ ಮೇಲಾಧಿಕಾರಿಗಳಿಗೆ, ಪ್ರಸ್ತಾವನೆ ಸಲ್ಲಿಸಿ ನವೀಕರಣ ಸಂಬಂಧ ಮೇಲಾಧಿಕಾರಿಗಳು ಅನುಮತಿ ನೀಡಿದ್ದಲ್ಲಿ ಅದರ ದಾಖಲೆಗಳನ್ನು ಸಹ ಅಪ್‌ಲೋಡ್ ಮಾಡಿ ನವೀಕರಣಕ್ಕಾಗಿ ಶಿಫಾರಸ್ಸು ಮಾಡಿ ಸಲ್ಲಿಸುವುದು.

6. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ತಯಾರಿಕಾ/ಮಾರಾಟ/ ದುರಸ್ತಿ ಅನುಜ್ಞಾರ್ಥಿಗಳು ಅವರ ಅನುಜ್ಞಾಪತ್ರಗಳ ಸ್ವಯಂ ಚಾಲಿತ ನವೀಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರಿಗೆ ದಿನಾಂಕ:01-11-2022 ರಿಂದ 30-11- 2022 ರೊಳಗೆ ಪರಿಶೀಲನೆಗೆ ಒಳಪಡಿಸತಕ್ಕದ್ದು, ಹಾಗೂ ಈ ಪ್ರಕ್ರಿಯೆಯನ್ನು ನವೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಲು ತಿಳಿಸಿದೆ.

ಪು.ತಿ.ನೋ...

**7**. ರಾಜ್ಯದ ಎಲ್ಲಾ ತಯಾರಕ /ಮಾರಾಟ/ ದುರಸ್ಥಿ ಅನುಜ್ಞಾರ್ಥಿಗಳ ಅನುಜ್ಞಾಪತ್ರಗಳ ನವೀಕರಣಕ್ಕೆ ಡಿಸೆಂಬರ್ 01 ರಿಂದ ಡಿಸೆಂಬರ್ 31 ರವರೆಗೆ (01-12-2022 ರಿಂದ 31-12-2022) ಇ-ಮಾಪನ್ ತಂತ್ರಾಂಶದಲ್ಲಿ ಸ್ವಯಂ ಚಾಲಿತ ನವೀಕರಣಕ್ಕೆ ಅವಕಾಶ ಕಲ್ಪಿಸಿದ್ದು ಸದರಿ ಅವಧಿಯೊಳಗೆ ನಿಗಧಿತ ನವೀಕರಣ ಶುಲ್ಕ ಭರಿಸಿ ನವೀಕರಣ ಮಾಡಿಕೊಳ್ಳುವುದು.

**8**. ಅನುಜ್ಞಾರ್ಥಿಗಳು ನವೀಕರಣ ಪ್ರಸ್ತಾವನೆಯನ್ನು ಅನುಜ್ಞಾಪತ್ರದ ಸಿಂಧುತ್ವದ ಅವಧಿಯು ಮುಗಿಯುವ ಮುನ್ನ ಸಲ್ಲಿಸದ್ದಿದ್ದಲ್ಲಿ, ದಿನಾಂಕ:01-01-2023 ರಿಂದ 31-01-2023 ರೊಳಗೆ ಅನುಜ್ಞಾಪತ್ರವನ್ನು 2023 ನೇ ಸಾಲಿಗೆ ನವೀಕರಿಸಿಕೊಳ್ಳಲು ಇಚ್ಚಿಸಿದ್ದಲ್ಲಿ, ಕಾನೂನು ಮಾಪನಶಾಸ್ತ್ರ ನಿಯಂತ್ರಕರಿಗೆ ಸಂಬಂಧಿಸಿದ ಸಹಾಯಕ ನಿಯಂತ್ರಕರ ಮೂಲಕ ಸಮುಚಿತ ಮಾರ್ಗದಲ್ಲಿ ಅಥವಾ ನೇರವಾಗಿ ಮಾನ್ಯ ನಿಯಂತ್ರಕರಿಗೆ ವಿಳಂಬಕ್ಕೆ ಸಕಾರಣಗಳೊಂದಿಗೆ ಮನವಿ ಸಲ್ಲಿಸಿ, ಲಿಖಿತ ಅನುಮತಿ ಪಡೆದ ನಂತರ, ಅರ್ಜಿಯನ್ನು ಆನ್ ಲೈನ್ ನಲ್ಲಿ ಸ್ವಯಂ ಚಾಲಿತ ನವೀಕರಣಕ್ಕೆ ಸಲ್ಲಿಸಬಹುದು. ಸದರಿ ಅನುಜ್ಞಾರ್ಥಿಗಳು ನವೀಕರಣ ಶುಲ್ಕದೊಂದಿಗೆ ಹೆಚ್ಚುವರಿ ಶುಲ್ಕ ಭರಿಸಬೇಕಾಗಿರುತ್ತದೆ. ದಿನಾಂಕ:31-01-2023ರ ನಂತರ ಸಲ್ಲಿಸಲಾಗುವ ನವೀಕರಣ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

**9**. ನವೀಕರಣಗೊಂಡ ಮೂಲ ಅನುಜ್ಞಾಪತ್ರಗಳು ಸಂಬಂಧಪಟ್ಟ ಅನುಜ್ಞಾರ್ಥಿಗಳ ಲಾಗಿನ್ ನಲ್ಲಿ ಲಭ್ಯವಿರುತ್ತದೆ. ಸದರಿಯವರು ಅನುಜ್ಞಾ ಪತ್ರಗಳನ್ನು ಪ್ರಿಂಟ್ ಮಾಡಿಕೊಳ್ಳುವುದು.

**ವಿ.ಸೂ: ತಂತ್ರಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆಗಳಿದ್ದಲ್ಲಿ ಇ-ಮಾಪನ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ: 080-2237373500, 080-22383500 ಹಾಗೂ www.emapan.karnataka.gov.in:86 ಇ-ಮೇಲ್ emapan.kar.lmdhelpdesk@gmail.com ನ್ನು ಸಂಪರ್ಕಿಸಿ ಸಹಾಯ ಪಡೆಯುವುದು.**

2.11.22

ನಿಯಂತ್ರಕರು
ಕಾನೂನು ಮಾಪನಶಾಸ್ತ್ರ ಇಲಾಖೆ,

**ಗೆ,**

ರಾಜ್ಯದ ಎಲ್ಲಾ ಅನುಜ್ಞಾರ್ಥಿಗಳಿಗೆ (ಕ್ಷೇತ್ರವ್ಯಾಪ್ತಿಯ ಸಹಾಯಕ ನಿಯಂತ್ರಕರ ಮುಖಾಂತರ)

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಉಪ ನಿಯಂತ್ರಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ಸಹಾಯಕ ನಿಯಂತ್ರಕರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ ಕಾನೂನು ಮಾಪನಶಾಸ್ತ್ರ ನಿರೀಕ್ಷಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4. ಕೇಂದ್ರ ಕಛೇರಿ ಅಧೀಕ್ಷಕರು (ಆಡಳಿತ), ಅಧೀಕ್ಷಕರು (ತಾಂತ್ರಿಕ) ಮತ್ತು ನಿಯಂತ್ರಕರ ಆಪ್ತ ಶಾಖೆಗೆ.
5. ರಕ್ಷಾತಾ ಕಡತಕ್ಕೆ.
6. ಇ-ಮಾಪನ್ ಹೆಲ್ಪ್ ಡೆಸ್ಕ್ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡುತ್ತಾ, ಸದರಿ ಸುತ್ತೋಲೆಯನ್ನು ಇ-ಮಾಪನ್ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಿದೆ.

## Flow Chart

Login

↓

Licence

↓

Licence Renewal Details

↓

Application Type / Application Category

↓

Manufacturer / Dealer / Repairer

↓

Search

↓

Licence No- Click

↓

Remarks to be furnished by Jurisdiction ACLM

## ಅನುಬಂಧ

### ತೂಕಗಳು, ಅಳತೆಗಳು, ಮೆಕ್ಯಾನಿಕಲ್ ತೂಕದ ಸಾಧನಗಳ ಹಾಗೂ ಆಟೋ ಮೀಟರ್ ಗಳ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳು

1. ಪರೀಕ್ಷಾರ್ಥ ಸಾಧನಗಳು

1) 5 ಕೆ.ಜಿ ಬೀಮ್ ಸ್ಕೇಲ್ "ಬಿ"ಕ್ಲಾಸ್ ಅಥವಾ 600 ಗ್ರಾಂ ವಿದ್ಯುನ್ಮಾನ ತೂಕದ ಯಂತ್ರ ಇ-ವ್ಯಾಲ್ಯೂ 1 ಎಂಜಿ ಕ್ಲಾಸ್ 1 ವರ್ಗ

2) 50 ಕೆ.ಜಿ.ಬೀಮ್ ಸ್ಕೇಲ್ "ಬಿ" ಕ್ಲಾಸ್ ಅಥವಾ 50 ಕೆ.ಜಿ. ವಿದ್ಯೂನ್ಮಾನ ತೂಕದ ಯಂತ್ರ ಎಲೆಕ್ಟ್ರಾನಿಕ್ ಮೆಷಿನ್ ಕ್ಲಾಸ್-2 ವರ್ಗ

3) 2 ಕೆ.ಜಿ ಯಿಂದ 1 ಗ್ರಾಂ ವರೆಗೆ ಬುಲಿಯನ್ ವೈಟ್ಸ್

4) 20.ಕೆ.ಜಿ ಯಿಂದ 50 ಗ್ರಾಂ ವರೆಗೆ ಕಬ್ಬಿಣದ ಟೆಸ್ಟ್ ಬಟ್ಟುಗಳು

5) 20 ಗ್ರಾಂ ನಿಂದ 1 ಗ್ರಾಂ ನಾಬ್ ಟೈಪ್ ಟೆಸ್ಟ್ ಬ್ರಾಸ್ ವೈಟ್ಸ್

6) 500 ಮಿಲಿ.ಗ್ರಾಂ ನಿಂದ 1 ಮಿಲಿ ಗ್ರಾಂ ಶೀಟ್ ಮೆಟಲ್ ವೈಟ್ಸ್

7) 2 ಮೀಟರ್ ಉದ್ದಳತೆ

8) 5 ಲೀಟರ್ ನಿಂದ 20 ಮಿಲಿ ಅಳತೆಗಳು

### ಎಲೆಕ್ಟ್ರಾನಿಕ್ ತೂಕದ ಸಾಧನಗಳ ದುರಸ್ತಿದಾರರು ಹೊಂದಿರಬೇಕಾದ ಪರೀಕ್ಷಾರ್ಥ ಸಾಧನಗಳು

1. ಪರೀಕ್ಷಾರ್ಥ ಸಾಧನಗಳು

1) 20 ಕೆ.ಜಿ ಎಲೆಕ್ಟ್ರಾನಿಕ್ ಬ್ಯಾಲೆನ್ಸ್ ಕ್ಲಾಸ್-II

2) 2 ಕೆ.ಜಿ ಯಿಂದ 1 ಗ್ರಾಂ ವರೆಗೆ ಬುಲಿಯನ್ ವೈಟ್ಸ್

3) 2 ಕೆ.ಜಿ ಯಿಂದ 50 ಗ್ರಾಂ. ನಾಬ್ ಟೈಪ್ ಬ್ರಾಸ್ ವೈಟ್ಸ್

4) 20 ಗ್ರಾಂ ನಿಂದ 1 ಗ್ರಾಂ. ನಾಬ್ ಟೈಪ್ ಬ್ರಾಸ್ ವೈಟ್ಸ್

5) 500 ಮಿಲಿ ಗ್ರಾಂ ನಿಂದ 1 ಮಿಲಿ ಗ್ರಾಂ. ಶೀಟ್ ಮೇಟಲ್ ವೈಟ್ಸ್

### ಎಲ್ಲಾ ರೀತಿಯ ವೇಬ್ರಿಡ್ಜ್ ಗಳ ದುರಸ್ತಿದಾರರಿಗೆ

1. ಪರೀಕ್ಷಾರ್ಥ ಸಾಧನಗಳು

20 ಕೆ.ಜಿ.ಕಬ್ಬಿಣದ ಬಟ್ಟುಗಳು-50 ಬಟ್ಟುಗಳು

### ಸ್ಟೋರೇಜ್ ಟ್ಯಾಂಕ್ ದುರಸ್ತಿದಾರರಿಗೆ:

1. ಪರೀಕ್ಷಾರ್ಥ ಸಾಧನಗಳು

1. 2 ಲೀಟರ್ ನಿಂದ 20 ಮಿ.ಲಿ.ಅಳತೆಗಳ
2. 10 ಲೀ/2 ಮತ್ತು 5 ಲೀ/2 ಕಾನಿಕಲ್ ಮೆಸರ್ಸ್
3. 15 ಮೀ ಸ್ಟೀಲ್ ಟೇಪ್.

2.11.22

ನಿಯಂತ್ರಕರು

ಕಾನೂನು ಮಾಪನಶಾಸ್ತ್ರ ಇಲಾಖೆ